ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್.

1907ನೆ ಇಸವಿ ಜೂನ್ ತಾರೀಖು 6ನೆ ಗುರುವಾರ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಪ್ರೆಸಿಡೆಂಟರು ಎಂ. ಚಂಗಯ್ಯ ಶೆಟ್ಟರವರು, ಎಸ್‌ಕ್ವೈಯರ್, ಬಿ. ಎ.

ವೈಸ್ ಪ್ರೆಸಿಡೆಂಟರು ಬಿ. ಭೀಮರಾಯರವರು, ಎಸ್‌ಕ್ವೈಯರ್, ಬಿ. ಎ.

ಅಫಿಷಿಯಲ್ ಮೆಂಬರುಗಳು.

1. ಚಿತ್ರದುರ್ಗದ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
2. ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.
3. ದಾವಣಗೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
4. ಚಿತ್ರದುರ್ಗದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
5. ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೌ॥ ಸೈಯದ್ ಮಹಮ್ಮದ್ ಹಸೇ ಸಾಹೇಬರವರು.
2. ,, ಟಿ. ಸ್ವಾಮಿರಾಯಾಚಾರ್ರು.
3. ,, ಪಟೇಲ್ ಕೆಂಚವೀರಪ್ಪನವರು.
4. ,, ನಾಯಕನಹಟ್ಟಿ ಹನುಮಂತಪ್ಪನವರು.
5. ,, ನೇರ್ಲಹಳ್ಳಿ ಸಂಣಪ್ಪನವರು.
6. ,, ಭಾರಿ ಸಂಣಪ್ಪನವರು.
7. ,, ಜಗಲೂರು ಫಕೀರ್ ಸಾಹೇಬರವರು.
8. ,, ಸಿ. ಎಸ್. ಕೃಷ್ಣಪ್ಪನವರು.
9. ,, ಗುಂಡೇರಿ ಗೋಪಾಲಯ್ಯನವರು.
10. ,, ನಾಡಿಗ ಸಿದ್ದರಾಮಯ್ಯನವರು.
11. ,, ಹೊಸದುರ್ಗದ ಖಾಸಿಂಸಾಹೇಬರವರು.
12. ,, ಪಾಳೇದಹಳ್ಳಿ ನಾಗಪ್ಪನವರು.
13. ,, ಹರಿಹರದ ಬಾಲಕೃಷ್ಣರಾಯರವರು.
14. ,, ದಾವಣಗೆರೆ ಷಡಾಕ್ಷರಪ್ಪನವರು.
15. ,, ಡಿಟೋ ನಬೀ ಸಾಹೇಬರವರು.
16. ,, ಹಿರಿಯೂರು ತಾಲ್ಲೂಕು ಚನ್ನಗಾರಯ್ಯನವರು.
17. ,, ಲೋಕಿಕೆರೆ ಹನುಮಂತಪ್ಪನವರು.
18. ,, ಸಾವುಕಾರ್ ವೀರಣ್ಣನವರು.

ಗೈರ್ ಹಾಜರ್.

ಸರಾ :—ಹೊಳಲ್ಕೆರೆ, ಜಗಲೂರು, ಚಳ್ಳಕೆರೆ ಈ ತಾಲ್ಲೂಕುಗಳ ಅಮಲ್ದಾರ್‌ರುಗಳು ಮತ್ತು (ಹರಿಹರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರರು) ಇವರ ವಿನಹಾ ಬಾಕಿ ಎಲ್ಲಾ ತಾಲ್ಲೂಕುಗಳ ಅಮಲ್ದಾರ್‌ರುಗಳು ಹಾಜರಿದ್ದರು.

1. 1907ನೆ ಇಸವಿ ಫೆಬ್ರವರಿ 14ನೆ ತಾರೀಖಿನಲ್ಲಿ ನಡೆದ ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು ಓದಿ ಧೃಡಪಡಿಸಲಾಯಿತು.

2. 1905ನೆ ಜನವರಿ ತಿಂಗಳಲ್ಲಿ ಗಾರ್ನ ವೆಂಟಿನಿಂದ ಸಾದರಾದ ಪ್ರೊಸೀಡಿಂಗ್ಸು ಅನುಸಂಧಿ ಬೋರ್ಡು ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಟ್ಟ ಕಾಂಗಾರಿಗಳ ಲೀಸ್ಟು ಓದಲಾಯಿತು :—

ರೆಜಲ್ಯೂಷನ್ :—ಅಪ್ರೂವ್ ಮಾಡಿದೆ.

3. ಸೂಲಗಿತ್ತಿಯರು ಹೆಡ್‌ಕ್ವಾರ್ಟರ್ ಬಿಟ್ಟು ಜೂರಗೆ ಪ್ರಯಾಣ ಮಾಡಿದಾಗ ಅವರಿಗೆ ಮೈಲೇಜು ಭತ್ಯ ಕೊಡುವ ವಿಷಯವನ್ನು ಸೂಚಿಸುವ ಸೀನಿಯರ್ ಸರ್ಜನ್ನರವರ ಲೆಟರ್ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯ ಕೇಳಿರುವ ಗಾರ್ನ ವೆಂಟು ಪ್ರೊಸೀಡಿಂಗ್ಸು ಓದಲಾಯಿತು.

ಸೂಲಗಿತ್ತಿ ತಾಲ್ಲೂಕು ಹೆಡ್ ಕ್ವಾರ್ಟರಿನಿಂದ ಹೊರಗೆ 5 ಮೈಲಿಗೆ ಜಾಸ್ತಿಯಾಗಿ ಪ್ರಯಾಣ ಮಾಡಿದಾಗ ಅವರಿಗೆ ಮೈಲಿ 1ಕ್ಕೆ 2 ಆಣೆ ಯಂತೆ ಟ್ರಾವಿಲಿಂಗ್ ಅಲೋಯೆನ್ಸ್ ಕೊಡುತ್ತಾ ಇದೆ. ಆದರೆ ಸೀನಿಯರ್ ಸರ್ಜನ್ನರವರು ಇವರಿಗೆ 5 ಮೈಲಿ ವಳಗೆ ಪ್ರಯಾಣ ಮಾಡಿದಾಗಲೂ ಕೂಡ ಮೈಲೇಜು ಕೊಡಬೇಕೆಂದು ಪ್ರಪೋಸ್ ಮಾಡಿದ ಹಾಗೆ ಕಾಣುತ್ತ. ಈ ವಿಷಯದಲ್ಲಿ ಬೋರ್ಡಿನವರು ಸದರಿ ಮಿಡ್‌ವೈಫ್‌ರುಗಳಿಗೆ 5 ಮೈಲಿ ವಳಗೆ ಪ್ರಯಾಣ ಮಾಡಿದಾಗ, ಅವರು ಸಂಬಂಧಪಟ್ಟ ಪಾರ್ಟಿಯವರಿಂದ ಯಾವ ರುಸುಂ ಪಡೆದಿಲ್ಲವೆಂದು ಡಾಕ್ಟರಿಂದಲೇ ಆಗಲೀ ಅಥವಾ ತಾಲ್ಲೂಕು ಅಮಲ್ದಾರ್‌ರಿಂದಲೇ ಆಗಲಿ ಪಡೆದ ಸರಟಿಫಿಕೇಟ್ ತೋರಿಸುವ ಪಕ್ಷದಲ್ಲಿ ಹೋಗಿಬರುವ ಪ್ರಯಾಣಕ್ಕೆ ಬಟ್ಟಿಗೆ 1 ರೂಪಾಯಿ ಟ್ರಾವಿಲಿಂಗ್ ಅಲೋಯೆನ್ಸ್ ಕೊಡಬಹುದೆಂದು ತೀರ್ಮಾನಿಸಲಾಯಿತು.

4. ತಾಲ್ಲೂಕು ಬೋರ್ಡು ಮೆಂಬರಿಗೂ, ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರಿಗೂ, ಟ್ರಾವಿಲಿಂಗ್ ಅಲೋಯೆನ್ಸ್ ರೂಲ್ಸಿನ ವಿಷಯದಲ್ಲಿ ಇರುವ ವ್ಯತ್ಯಾಸಕ್ಕೆ ಬೋರ್ಡಿನವರ ಎಕ್ಸ್‌ಪ್ಲನೇಷನ್ ಕೇಳಿ ಇರುವ ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

5. ಹರಿಯೂರು ತಾಲ್ಲೂಕು ಹರಿಯೆಬ್ಬೆ ಗ್ರಾಮದಲ್ಲಿ ರಸ್ಟ್‌ಹೌಸಿಗೆ ಬದಲಾಗಿ ಒಂದು 4ನೆ ಕ್ಲಾಸ್ ಮುಸಾಫರಖಾನಾ ಕಟ್ಟಲು ಸಾಧ್ಯವಿಲ್ಲವೆಂಬ ಅಂಶ ಕೇಳಿರುವ ಜನರಲ್ ಮತ್ತು ರವಿನ್ಯೂ ಸೆಕ್ರಿಟೆರಿ ಸಾಹೇಬರವರ ಡಾಕೆಟ್ ಓದಲಾಯಿತು.

ಅಡಿಗೆ ಮಾಡುವದಕ್ಕೊಸ್ಕರ ಒಂದು ಸಾಧಾರಣ ಅಡಿಗೆಮನೆಯನ್ನೂ, ಮತ್ತು 2 ಜೀರೆ ಚಿಕ್ಕ ಮನೆಗಳೂ, ಉಳ್ಳ ಒಂದು ಕಟ್ಟಡವು ಸದ್ಯಕ್ಕೆ ಸಾಕಾಗಿದೆ. 4ನೆ ಕ್ಲಾಸ್ ಮುಸಾಫರಖಾನಾ ಅವಶ್ಯಕವಿಲ್ಲ. ಆದ್ದರಿಂದ ಮೇಲ್ಕಂಡ ಕಟ್ಟಡಕ್ಕೆ ಸರಿಯಾದ ಅಂದಾಜು ತಯಾರಿಯಿಂದ ಗೌರ್ನಮೆಂಟಿಗೆ ಮಂಜೂರು ಬಗ್ಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

6. ಸೋಮಲಾಪುರದ ರೈಲ್ವೆ ಸ್ಟೇಷನ್‌ಗೆ ಹೋಗುವ ರಸ್ತೆಯಲ್ಲಿ ಸರಕುಗಳ ಓಡ್ಯಾಟ ಬಹಳ ಜಾಸ್ತಿಯಾಗಿರುವದಾದರೆ, ಅಲ್ಲಿ ಬಂದು ಟೋಲ್‌ಗೇಟ್ ಇಡಲು ಸಾಧ್ಯವಿಲ್ಲವೇ ಎಂಬ ಅಂಶ ಕೇಳಿರುವ ಜನರಲ್ ಮತ್ತು ರವಿನ್ಯೂ ಸೆಕ್ರಿಟೆರಿಯವರ ಡಾಕೆಟ್ ಓದಲಾಯಿತು.

ಅಮಲ್ದಾರ್ರಿಂದ ಆ ರಸ್ತೆಯಲ್ಲಿ ಎಷ್ಟು ಗಾಡಿಗಳು ಓಡ್ಯಾಡುತ್ತವೆ ಎಂಬ ವಿಷಯದಲ್ಲಿ ರಿಪೋರ್ಟು ತರಿಸಿಕೊಳ್ಳುವದಕ್ಕೊಸ್ಕರ ಬರುವ ವಿಾಟಿಂಗಿನಲ್ಲಿ ಈ ವಿಷಯ ಚರ್ಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

7. ದೊಡ್ಡಿಗೆ ದಾಖಲಾದ ಮೇಕೆಗಳಿಗೆ ಜುಲ್ಮಾನೆ ರೇಟನ್ನು ಜಾಸ್ತಿಮಾಡುವ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯ ಕೇಳಿರುವ ಜನರಲ್ ಮತ್ತು ರವಿನ್ಯೂ ಸೆಕ್ರಿಟೆರಿಯವರ ಡಾಕೆಟ್ ಓದಲಾಯಿತು.

ಸದರಿ ಮೇಕೆಗಳಿಗೆ ಈಗ ದಾಖಲ್ಮಾಡಿರುವ ಜುಲ್ಮಾನೆಯೇ ಸಾಕಾಗಿದೆ, ವಿನಹಾ ಜಾಸ್ತಿ ಮಾಡಲು ಅನುಕೂಲವಿಲ್ಲವೆಂದು ತೀರ್ಮಾನಿಸಲಾಯಿತು.

8. ಹರಿಯೂರ್‌ನಲ್ಲಿರುವ ಮುಸಾಫರಖಾನೆಯ 4 ಕೊಠಡಿಗಳನ್ನು ಅನ್ನ ಛತ್ರಕ್ಕಾಗಿ ಮುಜರಾಯಿ ಡಿಪಾರ್ಟ್‌ಮೆಂಟಿಗೆ ಬಿಟ್ಟುಕೊಡಲು ಸಾಧ್ಯವೇ ಎಂಬ ಅಂಶ ಕೇಳಿರುವ ಜನರಲ್ ಮತ್ತು ರವಿನ್ಯೂ ಸೆಕ್ರಿಟೆರಿಯವರ ಡಾಕೆಟ್ ಓದಿ ಅಪ್ರೂವ್ ಮಾಡಲಾಯಿತು.

9. ಪ್ರಾವಿಸ್ ಮಳೆ ಕೆಲವು ಯೂನಿರ್ಯಗಳನ್ನು, ಮಂಜೂರ್ಮಾಡಿ, 300 ಮನೆ ಅಥವಾ 1,000 ಪ್ರಜೆಗಳುಳ್ಳ ಗ್ರಾಮುಗಳನ್ನು ಯೂನಿರ್ಯ ಆಗಿ ಮಾಡಬಹುದೆಂಬ ಅಂಶ ತಿಳಿಸುವ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

10. ಮೊಳಕಾಲ್ಮೂರು ತಾಲ್ಲೂಕು ನಾಗಸಮುದ್ರ ಗ್ರಾಮವನ್ನೂ ಮತ್ತು ಹರಿಯೂರು ತಾಲ್ಲೂಕು ಮರಡೀಹಳ್ಳಿ ಗ್ರಾಮವನ್ನೂ, ಯೂನಿರ್ಯ ಆಗಿ ಮಾಡಲು ಬೇಕಾದ ಸಂಗತಿಗಳನ್ನು ಆಯಾ ತಾಲ್ಲೂಕು ಅಮಲ್ದಾರುಗಳಿಂದ ತರಿಸಿಕೊಂಡು ಸದರಿ ವಿಷಯವನ್ನು ಗೌರ್ನಮೆಂಟಿಗೆ ಸಬ್‌ಮಿಟ್ ಮಾಡಬೇಕೆಂದು ತೀರ್ಮಾನಿಸಲಾಯಿತು.

11. ಹರಿಯೂರ್ ತಾಲ್ಲೂಕು ಕೂನಿಕೆರೆ ಗ್ರಾಮದ ಸಂತೆಯನ್ನು ವಜಾ ಮಾಡುವ ವಿಷಯದಲ್ಲಿ ರಿಪೋರ್ಟು ಮಾಡಬೇಕೆಂದು ಕೇಳಿರುವ ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಲಾಯಿತು.

ಕೂಲೀ ಜನಗಳು ಕ್ಯಾಂಪು ಬಿಟ್ಟು ಹೋಗಿರುವದ್ದರಿಂದ ಈ ಗ್ರಾಮದಲ್ಲಿ ಸಂತೆ ನಡೆಯುವದಿಲ್ಲ. ಆದ್ದರಿಂದ ಇದನ್ನು ವಜಾ ಮಾಡಬಹುದೆಂದು ತೀರ್ಮಾನಿಸಲಾಯಿತು.

12. ವಿಾಟಿಂಗ್‌ಗಳಲ್ಲಿ ಬೋರ್ಡು ಮೆಂಬರುಗಳಿಗೆ 25 ಕೂರ್ಚಿಗಳನ್ನು ಜಾಸ್ತಿಯಾಗಿ ಸಪ್ಲೈ ಮಾಡಬೇಕೆಂದು ಪ್ರಪೋಜು ಮಾಡಿದ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವನ್ನು ಕೇಳಿರುವ ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಲಾಯಿತು.

ಹಿಂದೆ ಕುರ್ಚಿಗಳು ಸಪ್ಲೈ ಆಗಿಲ್ಲದಿರುವದರಿಂದಲೂ, ಮತ್ತು ಈಗ ವಿಾಟಿಂಗ್‌ನಲ್ಲಿ ಬಹಳ ತೊಂದರೆಯುಂಟಾಗಿರುವದರಿಂದಲೂ, ಇದು ಮಂಜೂರ್ಮಾಡಿದೆ.

13. ಹೊನ್ನವಳ್ಳಿಯಿಂದ ಹೊಸದುರ್ಗಕ್ಕೆ ಬಂದು ಹೊಸದಾದ ರಸ್ತೆ ಹಾಕಬೇಕೆಂಬ ವಿಷಯವನ್ನು ಕುರಿತು ರಿಪೋರ್ಟು ಬಗ್ಗೆ ಕಳುಹಿಸಿರುವ ಜನರಲ್ ಮತ್ತು ರವಿನ್ಯೂ ಸೆಕ್ರಿಟೆರಿಯವರ ಡಾಕೆಟ್ ಓದಲಾಯಿತು.

ಈಗ ಸದ್ಯಕ್ಕೆ ಹಣವಿರುವದಿಲ್ಲವಾದ್ದರಿಂದ ಮುಂದೆ ಚರ್ಚಿಸಲ್ಪಡತಕ್ಕದ್ದೆಂದು ತೀರ್ಮಾನಿಸಲಾಯಿತು.

14. ಹಿಂದಿನ ಸಾಲಿನಲ್ಲಿ ಪೂರೈಸದೆ ನಿಂತ ಕಾಂಗಾರಿಗಳಿಗೆ ಆಪ್ರೋಪಿಯೇರ್ಷನ್ ಮೊಬಲಗು ಮಂಜೂರ್ಮಾಡಿರುವ ಮತ್ತು ಈಗ ಹಾಲಿ ಪೂರೈಸದೆ ನಿಂತಿರುವ ಕಾಂಗಾರಿಗಳ ಲೀಸ್ಟ್ ನೋಡುವಲ್ಲಿ ಸ್ಥಳೀಯ ಅಧಿಕಾರಿಗಳ ಅಶ್ರದ್ಧೆ ತುಂಬಾ ಇದೆಯೆಂದು ಕಂಡುಬರುತ್ತೆ ಎಂಬ ವಿಷಯವನ್ನು ಕ್ಷುರಿತು ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಲಾಯಿತು.

ಈ ವಿಷಯವನ್ನು ಈ ಡಿಸ್ಟ್ರಿಕ್ಟಿನ ಎಲ್ಲಾ ಅಮಲ್ದಾರಿಗಳಿಗೆ ತಿಳಿಸಬೇಕಲ್ಲದೆ ಈಗ ಹಾಲಿ ನಡೆಯುತ್ತಿರುವ ಕಾಂಗಾರಿಗಳನ್ನು ಸಾಲಾಬೈರು ವಳಗ ಪೂರೈಸಬೇಕೆಂದು ಖಂಡಿತವಾದ ಹುಕುಂ ಕೊಡಬೇಕೆಂದು ತೀರ್ಮಾನಿಸಲಾಯಿತು.

15. ವಾರ್‌ಕ್ರೊಂದಾನರ್ತಿ ಅಸಿಸ್ಟಂಟ್ ಅಸಿಸ್ಟೆಂಟರವರು ಗ್ರಾಮಾಂತರಕ್ಕೆ ಹೋಗಿ ನೋಡಲು ಸಾಧ್ಯವಾಗುವದಿಲ್ಲವಾದ್ದರಿಂದ ಸದರಿ ಗ್ರಾಮಗಳಲ್ಲಿ ಸರ್ಟಿಫಿಕೇಟ್ ಪಡೆದ ನೇಟಿವ್ ಪಂಡಿತರನ್ನೇ ಆಗಲೀ, ಅಥವಾ ಹಕೀಂರನ್ನೇ ಆಗಲೀ ನೇಮಿಸಬಹುದೇ ? ಹ್ಯಾಗೆ ? ಎಂಬ ವಿಷಯವನ್ನು ಕುರಿತು ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಲಾಯಿತು.

ಈ ಕೆಳಗೆ ನಮೂದಿಸಿರುವ ಗ್ರಾಮಗಳು ಬಹಳ ಅನಾರೋಗ್ಯ ಸ್ಥಿತಿಯುಳ್ಳವಾದ್ದರಿಂದ ಈ ಗ್ರಾಮಗಳಲ್ಲಿ ಒಬ್ಬೊಬ್ಬ ನೇಟಿವ್ ಪಂಡಿತರನ್ನೇ ಆಗಲೀ ಅಥವಾ ಹಕೀಂರನ್ನೇ ಆಗಲೀ ನೇಮಿಸುವದು ಬಹಳ ಉತ್ತಮವಾಗಿದೆ ಎಂದು ತೀರ್ಮಾನಿಸಿದರು.

(1) ಭರಮಸಾಗರ. (2) ನಾಯಕನಹಟ್ಟಿ. (3) ಚಿತ್ರಹಳ್ಳಿ. (4) ಧರ್ಮಪುರ. (5) ಬಿಳಿಚೋಡು. (6) ಸೊಕ್ಕೆ (7) ಜ್ಯಾನಕಲ್ಲು. (8) ಬೂದಿಹಾಳು. (9) ಅಣಜಿ. (10) ಹದಡಿ. (11) ದೇವರಬ್ಯಾಲದ ಕೆರೆ. (12) ಸಿರಿಗೆರೆ. (13) ದೇವಸಮುದ್ರ.

16. ಚಿತ್ರದುರ್ಗದ ತಾಲ್ಲೂಕು ಭೀಮಸಮುದ್ರದಿಂದ ವಿಜಾಪುರಕ್ಕೆ ರಸ್ತೆಯನ್ನು ಸರ್ವೆ ಮುಂತಾದ್ದು ಮಾಡುವದಕ್ಕೋಸ್ಕರ ತಯಾರಾದ 220 ರೂಪಾಯಿನ ಅಂದಾಜವನ್ನು ಕೌಂಟರ್ ಸೈನಿಗೆ ಕಳುಹಿಸಿರುತ್ತೆ ಎಂಬ ವಿಷಯವುಳ್ಳ ಚಿತ್ರದುರ್ಗದ ಡಿವೀರ್ಜ ಎಕ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಲೆಟರ್ ಓದಲಾಯಿತು.

ಈ ಕಾಂಗಾರಿಯ ಅವಶ್ಯಕತೆ ವಿಷಯದಲ್ಲಿ ಜವಾಬು ಇಂಜನಿಯರ್ ಸಾಹೇಬರವರನ್ನು ಕೇಳಬೇಕೆಂದು ತೀರ್ಮಾನವಾಯಿತು.

17. ರಾಣಿಕೆರೆಯಲ್ಲಿ ಇರುವ ಡಿ. ಪಿ. ಡಬ್ಲ್ಯು. ಕಟ್ಟಡವನ್ನು ರವಿನ್ಯೂ ಡಿಪಾರ್ಟ್‌ಮೆಂಟಿನವರ ವಶಕ್ಕೆ ತಗದುಕೊಳ್ಳಬಹುದೆಂದು ಪ್ರಪೋಸ್ ಮಾಡಿರುವ ವಿಷಯವುಳ್ಳ ಚಳ್ಳಕೆರೆ ಸಬ್ ಡಿವಿರ್ಜ ಆಫಿಸರವರ ಡಾಕೆಟ್ ಓದಲಾಯಿತು.

ಈ ಕಟ್ಟಡವು ಬೋರ್ಡಿನವರಿಗೆ ಬೇಕಾಗಿರುವದಿಲ್ಲ.

18. ಜಗಲೂರು ತಲಾವು ಕಾಂಗಾರಿಯು 1,644 ರೂಪಾಯಿ ಅಂದಾಜವನ್ನು ಕೌಂಟರ್. ಸೈನಿಗೆ ಕಳುಹಿಸಿಕೊಟ್ಟಿರುವ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಡಾಕೆಟ್ ಓದಲಾಯಿತು.

ಅಪ್ರೂವ್ ಮಾಡಿದೆ.

19. ಹರಿಹರ-ಹರಪನಹಳ್ಳಿ ರಸ್ತೆಯಲ್ಲಿ ಗಾಡಿಗಳ ತಿರಗಾಟ ಬಹಳ ಜಾಸ್ತಿಯಾಗಿರುವದರಿಂದಲೂ, ಹಾಲಿ ಇರುವ 50 ರೂಪಾಯಿ ಮೈಲೇಜು ಅಲಾಟುಮೆಂಟು ಸಾಕಾಗುವದಿಲ್ಲವೆಂತಲೂ ಆದ್ದರಿಂದ ಸದರಿ ಅಲಾಟುಮೆಂಟನ್ನು ಒಂದು ನೂರು 100 ರೂಪಾಯಿಗೆ ಹೆಚ್ಚಿಸಬೇಕೆಂದು ಕೇಳಿರುವ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಡಾಕೆಟ್ ಓದಲಾಯಿತು.

ದುಗ್ಗಹತ್ತಿ ಗುಡ್ಡದಲ್ಲಿ ಮ್ಯಾಂಗನೀಸ್ ಸಿಕ್ಕುವದರಿಂದ ಇದನ್ನು ಹರಿಹರದ ರೈಲ್ವೆ ಸ್ಟೇಷನಿಗೆ ಸಾಗಿಸಲು ಈ ರಸ್ತೆಯಲ್ಲಿ ಭಂಡಿಗಳ ಓಡ್ಯಾಟ ಬಹಳವಾಗಿದೆ. ಇದರಿಂದ ರಸ್ತೆಯು ಬಹಳವಾಗಿಕೊರೆದು ರಿಪೇರಿಗೆ ಕಾರಣ ಉಂಟಾಗಿದೆ. ಈ ರಿಪೇರಿಯು ಸಾಧಾರಣವಾಗಿ ಆಗುವದಿಲ್ಲವಾದ್ದರಿಂದಲೂ, ಮತ್ತು ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲದಿರುವದರಿಂದಲೂ, ಈ ಕಾಂಗಾರಿಗೋಸ್ಕರ ಇಲ್ಲಿ ಓಡ್ಯಾಡತಕ್ಕ ಗಾಡಿಗಳ ಮೇಲೆ ಟೋಪರೇರಿ ತೆರಿಗೆ ಹಾಕಲು ಲೋಕಲ್ ಬೋರ್ಡು ರಗ್ಯುಲೇಷನಲ್ಲಿ ಬಂದು ರೂಲು ಜಾರಿಗೆ ತರಬೇಕೆಂಬದಾಗಿ ಗೌರ್ನಮೆಂಟಿನವರನ್ನು ಕೇಳಲು ಅಭಿಪ್ರಾಯಪಟ್ಟಿದೆ.

20. ಹೊಳಲ್ಕೆರೆಯಲ್ಲಿ ಡಿ. ಪಿ. ಡಬ್ಲ್ಯೂ. ಆಫೀಸುಗೋಸ್ಕರ ಕಟ್ಟತಕ್ಕ ಕಟ್ಟಡದ ಅಂದಾಜ ಮುಂಜಾರ್ಮಾಡಿಲ್ಲವೆಂಬ ಅಂಶವುಳ್ಳ ಇಂಜನಿಯರ್ ಸಾಹೇಬರವರ ಲೆಟರ್ ಓದಲಾಯಿತು.

ಸಬ್ ಡಿವೀರ್ಜ ಆಫೀಸುಗೋಸ್ಕರ ಉಪಯೋಗಿಸಿಕೊಂಡಿರುವ ಕೋಣೆಗಳಿಗೆ ರೂಲ್ಸ್ ಮೇರೆ ಬಾಡಿಗೆ ಠರಾಯಿಸಬೇಕೆಂಬದಾಗಿ ನಿರ್ಧರಿಸಲಾಯಿತು.

21. ಹೊಸದುರ್ಗ–ಜ್ಯಾನಕಲ್ಲು ರಸ್ತೆ, ಮತ್ತು ಮತ್ತೋಡು–ಹೊಸದುರ್ಗ ರಸ್ತೆ, ಇವೆರಡನ್ನೂ ರಿಪೇರಿ ಮಾಡಿಸಬೇಕೆಂಬ ವಿಷಯವುಳ್ಳ ಹೊಸದುರ್ಗ ತಾಲ್ಲೂಕು ಬೋರ್ಡು ರೆಜಲ್ಯೂಷ್ಯ ಓದಲಾಯಿತು.

ಸದ್ಯಕ್ಕೆ ಹಣವಿರುವದಿಲ್ಲ.

22. ನಾಯಕನಹಟ್ಟಿಯಿಂದ ತಳ್ಳಿಗೆ ಹೋಗತಕ್ಕ ಕಾಡುದಾರಿಯನ್ನು ಲೋಕಲ್ ಫಂಡು ರೋಡಾಗಿ ಮಾಡಲು ಅತ್ಯವಶ್ಯಕವೆಂಬ ವಿಷಯವುಳ್ಳ ಚಳ್ಳಕೆರೆ ತಾಲ್ಲೂಕು ಬೋರ್ಡು ರೆಜಲ್ಯೂಷ್ಯ ಓದಲಾಯಿತು.

ಹಣ ದೊರತಾಗ ಈ ವಿಷಯ ಚರ್ಚಿಸಲ್ಪಡತಕ್ಕದ್ದು.

23. ಡಿಸ್ಟ್ರಿಕ್ಟ್ ಬೋರ್ಡಿನಿಂದ ನಡಿಸಲ್ಪಡುವ ಕಾಂಗಾರಿಯ ರೇಟ್ ಷೆಡ್ಯೂಲ್ ಕಾಪಿಯನ್ನು ಕೇಳಿರುವ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

ಹಾಲಿ ರಿವೈಜಾಗಿರುವ ಷೆಡ್ಯೂಲ್ ಕಾಪಿಯನ್ನು ಗೌರ್ನಮೆಂಟಿಗೆ ಕಳುಹಿಸಿಕೊಡತಕ್ಕದ್ದೆಂದು ತೀರ್ಮಾನಿಸಲಾಯಿತು.

24. ಈ ಕೆಳಗಿನ ವಿಷಯಗಳನ್ನು ಓದಿ ರಿಕಾರ್ಡು ಮಾಡಲಾಯಿತು :—

(a) ಕಾಂಗಾರಿಗಳ ಅಂದಾಜವನ್ನು ಬಜ್ಜೆಟ್ಟಿನಲ್ಲಿ ದಾಖಲ್ಮಾಡುವದಕ್ಕೆ ಮುಂಜೆ ಕ್ರಮವಾಗಿ ಅಂದಾಜಗಳನ್ನು ತಯಾರ್ಮಾಡಿಸಿ ಬಜ್ಜೆಟ್ಟಿನೊಂದಿಗೆ ಸಕಾಲದಲ್ಲಿ ಕಳುಹಿಸಿಕೊಡಬೇಕೆಂಬ ವಿಷಯವುಳ್ಳ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

(b) ಯೂನಿಯರ್ಜಗಳಲ್ಲರತಕ್ಕ ವ್ಯಾಪಾರಸ್ಥರಿಗೆ ತೆರಿಗೆ ವಜಾಮಾಡಿಧೆ ಎಂಬ ವಿಷಯವುಳ್ಳ ಗೌರ್ನಮೆಂಟು ಪ್ರೊಸೀಡಿಂಗ್ಸ್.

(c) ಗ್ರಾಮಗಳನ್ನು ಒಳ್ಳೇ ಶುಚಿಯಾದ ಸ್ಥಿತಿಯಲ್ಲಿ ಇಟ್ಟುಕೊಂಡಿರತಕ್ಕ ಪಟೇಲರಿಗೆ ಬಹುಮಾನಕೊಡತಕ್ಕದ್ದಕ್ಕೆ ಅಜವಾಯಿಷಿ ತರೀಖು ಸ್ಯಾಂಕ್ಷನ್ ಮಾಡಿರುತ್ತೆಂಬ ವಿಷಯವುಳ್ಳ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

(d) ಹಳ್ಳಿಗಳಲ್ಲಿ ಇಂಗ್ಲೀಷ್ ಕ್ಲಾಸುಗಳಾ ಇಡಲು ಗೌರ್ನಮೆಂಟಿನವರು ಕೊಡತಕ್ಕ ಸಹಾಯ ವಿಷಯದಲ್ಲಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್‌ರವರು ಪಟ್ಟರತಕ್ಕ ಅಭಿಪ್ರಾಯವನ್ನು ಗೌರ್ನಮೆಂಟಿನವರು ಅನುಮೋದಿಸಿರುತ್ತಾರಾದ ವಿಷಯವುಳ್ಳ ಪ್ರೊಸೀಡಿಂಗ್ಸ್.

(e) 1907—08ನೆ ಸಾಲಿಗೆ ಮಂಜೂರಾಗಿ ಬಂದಿರುವ ಈ ಡಿಸ್ಟ್ರಿಕ್ಟಿನ ಬಜೆಟ್.

(f) ಗ್ರಾಮಗಳನ್ನು ಇಂಪ್ರೂವ್‌ಮೆಂಟ್ ಬಗ್ಯೆ ಲೋಕಲ್ ಫಂಡು ಮೂಲಕ ಪೈಕಿ ಬಂದು ಭಾಗವನ್ನು ಉಪಯೋಗಿಸಬೇಕೆಂಬ ವಿಷಯ ತಿಳಿಸುವ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಲೆಟರ್.

(g) ಟೋಕರೆ ಗುತ್ತಾ ವಸೂಲ್ ಮಾಡತಕ್ಕ ವಿಷಯದಲ್ಲಿ ತಲಪಿರತಕ್ಕ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

(h) ಮೈಸೂರು ಡಿಸ್ಟ್ರಿಕ್ಟಿನಲ್ಲಿ ಭಾವಿಗಳಿಗೆ ಪಂಪುಗಳನ್ನು ತೆಗದುಕೊಳ್ಳಲು ಮಂಜೂರ್ಮಾಡಿರುವ ವಿಷಯವುಳ್ಳ ಗೌರ್ನಮೆಂಟು ಪ್ರೊಸೀಡಿಂಗ್ಸ್.

(i) ಲೋಕಲ್ ಫಂಡು ಕೆಲಸಕ್ಕೆ ಪ್ರತಿ ಡಿಸ್ಟ್ರಿಕ್ಟಿಗೂ, ಮತ್ತು ಪ್ರತಿ ತಾಲ್ಲೂಕಿಗೂ 15 ರೂಪಾಯಿ ತಲಬಿನ ಮೇಲೆ ಬಹುಬಟ್ಟ ನೌಕರನ್ನನ್ನು ಪೊಕರೂರ್ಮಾಡಿರುವ ವಿಷಯದಲ್ಲಿ ತಲಪಿರುವ ಗೌರ್ನಮೆಂಟು ಪ್ರೊಸೀಡಿಂಗ್ಸ್.

(j) ಚಿತ್ರದುರ್ಗದ ಟರ್ಕಾಹಾಲ್ ಕಟ್ಟಡವನ್ನು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಮ್ಯಾನೇಜ್‌ಮೆಂಟಿಗೆ ಕೊಟ್ಟಿರುವ ವಿಷಯದಲ್ಲೂ, ಮತ್ತು ಸದರಿ ಕಟ್ಟಡದ ರಿಪೇರಿ ಬಗ್ಯೆ 553 ರೂಪಾಯಿ ಅಂದಾಜುವನ್ನು ಮಂಜೂರ್ಮಾಡಿರುವ ವಿಷಯದಲ್ಲೂ, ಸಹ ತಲ್ಪಿರುವ ಗೌರ್ನಮೆಂಟು ಪ್ರೊಸೀಡಿಂಗ್ಸ್.

(k) ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗುಗಳಿಗೆ ಅಮಲ್‌ದಾರ್ರುಗಳು ಮತ್ತು ಡಿಪ್ಯುಟಿ ಅಮಲ್ದಾರ್ರುಗಳು ಬರುವಂತೆ ತಕ್ಕ ಏರ್ಪಾಡನ್ನು ಮಾಡಲು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೆ ಅಥರೈಸ್ ಮಾಡಿರುವ ವಿಷಯದಲ್ಲಿ ತಲ್ಪಿರುವ ಗೌರ್ನಮೆಂಟು ಪ್ರೊಸೀಡಿಂಗ್ಸ್.

(l) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸುಬ್ರಹ್ಮಣ್ಯ ಸ್ವಾಮಿಯ ಜಾತ್ರೆಯಲ್ಲಿ ನಡೆದ ಜಾನುವಾರು ಪ್ರದರ್ಶನ ವಿಷಯದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ ಡಿಪ್ಯುಟಿ ಕಲೆಕ್ಟರವರು ರಿಪೋರ್ಟು ಮಾಡಿರುವ ವಿಷಯದಲ್ಲಿ ತಲ್ಪಿರುವ ಗೌರ್ನಮೆಂಟು ಪ್ರೊಸೀಡಿಂಗ್ಸ್.

(m) 1904—05ನೆ ಸಾಲಿಗೆ ಬೆಂಗಳೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡು ಮೆಂಬರುಗಳಿಗೆ ಟ್ರಾವಿಲಿಂಗ್ ಅಲೋಯೆನ್ಸ್ ಬಿಲ್ಲನ್ನು ಷರಾ ಎನಿಸಿ ಮಂಜೂರ್ಮಾಡಿರುವ ವಿಷಯದಲ್ಲಿ ತಲ್ಪಿರುವ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

(n) ತಾಲ್ಲೂಕು ಹೆಡ್‌ಕ್ವಾರ್ಟರ್ಸಿನ ಆಸ್ಪತ್ರೆಗಳಲ್ಲಿ ಕಾಹಿಲೆ ಹೆಂಗಸರಿಗೆ ಪ್ರತ್ಯೇಕವಾದ ಕೊಠಡಿಗಳನ್ನು ಏರ್ಪಡಿಸಬೇಕೆಂಬುವವರ ಮೇಲೆ ಬೋರ್ಡಿನವರ ಅಭಿಪ್ರಾಯಗಳನ್ನು ರಿಕಾರ್ಡು ಮಾಡಿರುತ್ತಾರಾದ ವಿಷಯದಲ್ಲಿ ತಲಪಿದ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

25. ಹರಿಹರದ ವಾಟರ್ ಸಪ್ಲೈ ಪ್ರಾಜೆಕ್ಟನ್ನು ಮಂಜೂರ್ಮಾಡಿರುತ್ತಾರಾದ ವಿಷಯದಲ್ಲೂ, ಮತ್ತು ಇದಕ್ಕೆ ತಗಲುವ ಪ್ರತಿವರ್ಷದ ಖರ್ಚಿನಲ್ಲಿ ಅರ್ಧಭಾಗ ಅಂದರೆ, 1,500 ರೂಪಾಯಿಗಳನ್ನು ಲೋಕಲ್ ಫಂಡ್ಸಿನಿಂದಲೂ, ಇನ್ನರ್ಧಭಾಗವನ್ನು ಮ್ಯುನಿಸಿಪಲ್ ಫಂಡ್ಸಿನಿಂದಲೂ ವಿಾಟು ಮಾಡಬೇಕಾಗಿ ತಿಳಿಸುವ ವಿಷಯದಲ್ಲಿ ತಲಪಿರುವ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

ಡಿಸ್ಟ್ರಿಕ್ಟ ಫಂಡ್ಸಿಗೆ ಯಾವ ಸಂಬಂಧವೂ ಇರುವದಿಲ್ಲವಾದ್ದರಿಂದ ಸದರಿ ಫಂಡ್ಸಿನಿಂದ ಈ ಖರ್ಚನ್ನು ವಿಾಟು ಮಾಡಲು ನ್ಯಾಯವಾಗಿಲ್ಲವೆಂದು ಬೋರ್ಡಿನವರು ತೀರ್ಮಾನ ಮಾಡಿದರು.

26. 50 ಮನೆಗಳಿಗೆ ಮೇಲ್ಪಟ್ಟ ಮನೆಗಳುಳ್ಳ ಗ್ರಾಮಗಳಲ್ಲಿ ಸ್ಯಾನಿಟ್ಟರಿ ರೂಲ್ಸು ಜಾರಿಗೆ ತರಬೇಕೆಂಬ ವಿಷಯದಲ್ಲಿ ತಲಪಿರುವ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

ಈ ವಿಷಯವನ್ನು ಎಲ್ಲರೂ ಅನುಮೋದಿಸಿರುತ್ತಾರೆ.

27. ಮುಂದಿನ ಮೀಟಿಂಗು 1907ನೆ ಇಸವಿ ಆಗಸ್ಟ್ ತಾರೀಖು 28ಕ್ಕೆ ನಡೆಯತಕ್ಕದ್ದೆಂದು ಗೊತ್ತುಮಾಡಲಾಯಿತು.

ಎಂ. ಚಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಮೈಸೂರ ಗೆಜಿಟ್ ಚಂದಾದಾರರು ವಗೈರೆ.

ಮೈಸೂರ ಗೆಜಿಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜಿಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ಕವಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜಿಟ್ ಕಂಪೈಲರವರ ಹೆಸರಿಗೆ ವಿಳಾಸ ಬರಿಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಖರ್ಚಸಲ್ಕ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 0	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೀಯಾ ಕ್ವಾರ್ಟರಿಗೆ		0 14

ದೊಮ್ಮಪಾಯಿ ಪ್ರಕಾರ ದರಗಳು

	ರೂ. ಆ.
ಚಾಲ್ತಿ ವರುಷದ ಗೆಜಿಟ್ ಕಾಪಿ 1ಕ್ಕೆ ರಿಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ	0 8

ಹಿಂದಿನ ವರುಷದ ಗೆಜಿಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.